## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**ಸಿ.ಸಿ. ಸಂಃ 54/2024**

| | | | |
|---|---|---|---|
| **ಹೆಸರು** | ಸತೀಶ | **ಪಿಡಬ್ಲ್ಯೂ:** | 01 |
| **ತಂದೆ/ಗಂಡನ ಹೆಸರು** | ಎಲ್ ಆನಂದ | **ಸಿಡಬ್ಲ್ಯೂ:** | 01 |
| **ವಯಸ್ಸು** | 58 ವರ್ಷ | | |
| **ಉದ್ಯೋಗ** | ವ್ಯವಸಾಯ | | |
| **ವಾಸಸ್ಥಳ** | ಚಿಕ್ಕಹೊಸೂರು | | |

**ದಿಃ 27.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು. ಚಾಸಾ-2 ರವರು ಗೊತ್ತಿಲ್ಲ. ದಿನಾಂಕ 28.01.2024 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಚಂದ್ರಿಕಾ ಬಾರ್ ಗೆ ಹೋಗಿದ್ದೆ. ಅದಕ್ಕೂ ಮೊದಲು ಆರೋಪಿಗಳು ನನ್ನ ಜಮೀನು ಕೇಳಿದ್ದರು ತೇಗದ ಮರಗಳನ್ನು ಕೇಳಿದ್ದರು ಅವುಗಳನ್ನು ಕೊಟ್ಟಿರಲಿಲ್ಲ ಆ ವಿಚಾರವಾಗಿ ಆರೋಪಿಗಳು ಬಂದು ಇಬ್ಬರು ಹಿಡಿದುಕೊಂಡು ಹೊಡೆದರು ಆಗ ನನ್ನ ಮೇಲ್ಭಾಗದ 4 ಹಲ್ಲುಗಳು ಮುರಿದು ಹೋಯಿತು. ಆ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಸಾಕ್ಷಿಯು ಗುರುತಿಸಿರುವುದರಿಂದ ದೂರನ್ನು **ನಿ.ಪಿ-1** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ-1(ಎ)** ಎಂದು ಗುರುತಿಸಲಾಯಿತು. ನಂತರ ನಾನು ಕುಶಾಲನಗರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೇನೆ. ಅದೇ ದಿನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಮನೆಗೆ ಬಂದಿದ್ದೇನೆ. ಮರುದಿನ ಕೃತ್ಯ ನಡೆದ ಸ್ಥಳಕ್ಕೆ ಪೊಲೀಸರು ಬಂದು ಸ್ಥಳ ಮಹಜರ್ ಮಾಡಿದ್ದಾರೆ ಅದಕ್ಕೆ ನಾನು ಸಹಿ ಮಾಡಿದ್ದೇನೆ. ಮಹಜರ್ ನ್ನು **ನಿ.ಪಿ-2** ಮತ್ತು ಸಾಕ್ಷಿಯ ಸಹಿಯನ್ನು **ನಿ.ಪಿ-2(ಎ)** ಎಂದು

ಗುರುತಿಸಲಾಯಿತು. ಗಲಾಟೆಯಾದ ಜಾಗವನ್ನು ಪೊಲೀಸರಿಗೆ ನಾನೇ ತೋರಿಸಿದ್ದೇನೆ. ಆರೋಪಿಗಳು ನನಗೆ ಕೈಯಿಂದ ಹೊಡೆದಿದ್ದಾರೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ.ಎನ್.ಕೆ. ವಕೀಲರಿಂದಃ</u>**

ನನ್ನ ಮೇಲೆ 3 ಕ್ರಿಮಿನಲ್ ಪ್ರಕರಣಗಳು ಮತ್ತು 8 ಸಿವಿಲ್ ಪ್ರಕರಣಗಳಿವೆ. ನಾನು ಬಿ.ಇ ಓದಿದ್ದೇನೆ. ಚಂದ್ರಿಕಾ ಬಾರ್ ಗೆ ನಾನು 5 ಗಂಟೆಗೆ ಹೋಗಿದ್ದೆ. ಆರೋಪಿಗಳು ಸದರಿ ಬಾರ್ ಗೆ ಬರುವ ಮೊದಲು ಕೌಂಟರ್ ನಲ್ಲಿ ನಿಂತು ನಾನು 2 ಎಂ.ಹೆಚ್. ಕ್ವಾಟರ್ ಬಾಟಲ್ ಮದ್ಯ ಕುಡಿದಿದ್ದೆ. ಕೌಂಟರ್ ನಲ್ಲಿದ್ದ ಕ್ಯಾಶೀಯರ್ ನನಗೆ ಮದ್ಯದ ಬಾಟಲ್ ಗಳನ್ನು ಕೊಟ್ಟರು ಅವರ ಹೆಸರು ಗೊತ್ತಿಲ್ಲ. ಬಾರ್ ನಲ್ಲಿ ನಾನೊಬ್ಬನೆ ಇದ್ದೆ. ಸದರಿ ಘಟನೆಗೂ ಮೊದಲು ಆರೋಪಿಗಳಿಗೂ ನಿಮಗೂ ಎಷ್ಟು ವರ್ಷಗಳಿಂದ ದ್ವೇಷವಿತ್ತು ಎಂದರೆ 6 ತಿಂಗಳ ಹಿಂದೆ ಶುಂಠಿ ಬೆಳೆಯಲು ಜಮೀನು ಕೊಡದಿದ್ದ ವಿಚಾರಕ್ಕೆ ದ್ವೇಷ ಇತ್ತು. ಆ ವಿಚಾರಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ ದೂರು ಕೊಟ್ಟಿರಲಿಲ್ಲ. ಇಂತಹದ್ದೆ ವ್ಯಕ್ತಿ ಹೊಡೆದಿದ್ದಾರೆ ಎಂದು ದೂರಿನಲ್ಲಿ ಬರೆದಿದ್ದೀರಾ ಎಂದರೆ ಇಬ್ಬರು ಹೊಡೆದಿದ್ದಾರೆ ಯಾವ ವ್ಯಕ್ತಿ ಹೊಡೆದ ಏಟಿನಿಂದ ನನ್ನ ಹಲ್ಲು ಮುರಿದಿದೆ ಎಂದು ನಿಖರವಾಗಿ ಗೊತ್ತಿಲ್ಲ. ನಾನು ಧರಿಸಿದ್ದ ಬಟ್ಟೆಗೆ ರಕ್ತವಾಗಿತ್ತು. ಅದೇ ಬಟ್ಟೆಯಿಂದ ಆಸ್ಪತ್ರೆ ಮತ್ತು ಪೊಲೀಸ್ ಠಾಣೆಗೆ ಹೋಗಿದ್ದೆ. ಆ ಬಟ್ಟೆಯನ್ನು ಪೊಲೀಸರು ಕೇಳಿಲ್ಲ ಆದ್ದರಿಂದ ನಾನು ಕೊಟ್ಟಿಲ್ಲ. ನನ್ನಿಂದ ಬಿದ್ದು ಹೋಗಿದ್ದ ಹಲ್ಲುಗಳನ್ನು ನಾನು ತೆಗೆದುಕೊಂಡಿಲ್ಲ ಅಥವಾ ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆ ಹಲ್ಲುಗಳು ಏನಾದವು ಎಂದರೆ ನನಗೆ ಗೊತ್ತಿಲ್ಲ. ಚಂದ್ರಿಕಾ ಬಾರ್ ನಿಂದ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಒಂದು ಕಿಮೀ ದೂರವಿದೆ ಎಂದರೆ ಸರಿ. ಅದೇ ಬಾರ್ ನಿಂದ ಪೊಲೀಸ್ ಠಾಣೆಗೆ ಎರಡೂವರೆ ಕಿಮೀ ದೂರವಿದೆ. ಅದೇ ಚಂದ್ರಿಕಾ ಬಾರ್ ನಿಂದ ಕುಶಾಲನಗರ ಸರ್ಕಾರಿ ಆಸ್ಪತ್ರೆಗೆ 3 ಕಿಮೀ ದೂರವಿದೆ. ಗಲಾಟೆಯನ್ನು ಯಾರು ಬಿಡಿಸಿದ್ದಾರೆ

ಎಂದು ನಾನು ದೂರಿನಲ್ಲಿ ಬರೆಸಿಲ್ಲ. ಘಟನೆಗೂ ಮೊದಲು ನನ್ನ ಹಲ್ಲುಗಳು ಇತ್ತು ಎಂದು ತೋರಿಸುವ ದಾಖಲೆ ಅಂದರೆ ನನ್ನ ಮದುವೆಯ ಪೋಟೊ ಇದೆ ಅದನ್ನು ಪೊಲೀಸರಿಗೆ ಕೊಟ್ಟಿಲ್ಲ. ಮರುದಿನ ಪೊಲೀಸರು ಸ್ಥಳಕ್ಕೆ ಬಂದಾಗ ಪೊಲೀಸರಿಗೆ ಹಲ್ಲುಗಳನ್ನು ತೋರಿಸಿಲ್ಲ ಅದು ಸ್ಥಳದಲ್ಲಿ ಇರಲಿಲ್ಲ. ಘಟನೆಯಾದ ಕೂಡಲೇ ಹಲ್ಲುಗಳನ್ನು ಸೀಜ್ ಮಾಡಿ ಎಂದು ಪೊಲೀಸರಿಗೆ ಹೇಳಿದ್ದೇನೆ ಆದರೆ ಪೊಲೀಸರು ಮೊದಲು ಚಿಕಿತ್ಸೆ ಪಡೆದುಕೊಳ್ಳಿ ಎಂದು ಹೇಳಿದರು. ಪೊಲೀಸ್ ಠಾಣೆಯಲ್ಲಿ 15–20 ನಿಮಿಷಗಳ ಕಾಲ ಇದ್ದೆ. ಮಹಜರ್ ಗೆ ಬರುವಂತೆ ನನಗೆ ಫೋನ್ ಮಾಡಿ ಹೇಳಿದ್ದರು. ನಾನು 1984 ರಿಂದ ಮದ್ಯಪಾನ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದೇನೆ. ಘಟನೆ ದಿನ ನಾನು ಮತ್ತು ಆರೋಪಿಗಳು ಒಟ್ಟಾಗಿ ಮದ್ಯಪಾನ ಮಾಡಿಲ್ಲ. ನನಗೆ ಮೊದಲಿನಿಂದಲೇ ಹಲ್ಲುಗಳು ಇರಲಿಲ್ಲ ನಾನು ಮದ್ಯಪಾನ ಮಾಡಿ ಆರೋಪಿಗಳ ವಿರುದ್ಧ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಿಜವಾಗಿಯು ನನ್ನ ಹಲ್ಲುಗಳು ಬಿದ್ದಿದ್ದರೆ ಅದನ್ನು ತೆಗೆದುಕೊಂಡು ಪೊಲೀಸರಿಗೆ ಕೊಡುತ್ತಿದ್ದೆ ಎಂಬುದು ಸರಿಯಲ್ಲ. ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಮಾಡಿದ್ದೇನೆ. ಪೊಲೀಸರು ಸ್ಥಳಕ್ಕೆ ಬಂದಿಲ್ಲ ಮಹಜರ್ ಮಾಡಿಲ್ಲ, ಹಳೆಯ ದ್ವೇಷದಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**